**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 6856/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**

**ದಿನಾಂಕಃ** 03.09.2025 **ಸಿಡಬ್ಲ್ಯೂ.01**

| | |
|---|---|
| ಹೆಸರು | ಅಸುಂಡಿ ರುದ್ರಪ್ಪ |
| ತಂದೆ ಹೆಸರು | ಮಲ್ಲೇಶಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ದೀಟೂರು ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ರಿಂದ 4 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ದಿಃ 24.08.2024 ರಂದು ಸಂಜೆ 6.30 ಗಂಟೆಗೆ ದೇವಸ್ಥಾನದ ರಸ್ತೆಯಿಂದ ಮನೆಗೆ ಹೋಗುತ್ತಿದ್ದಾಗ ಸುರೇಶ, ಮಂಜ, ಮಾದೇವ, ರಘು, ಕೃಷ್ಣ ಮತ್ತು ಇತರರು ಬಂದು ಏಕಾಏಕಿ ನನ್ನನ್ನು ತರುಬಿ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕಟ್ಟಿಗೆ ಮತ್ತು ಕಲ್ಲುಗಳಿಂದ ನನ್ನನ್ನು ಹೊಡೆದರು. ಸುರೇಶಪ್ಪ ಮತ್ತು ಅವರ ಮಕ್ಕಳು ನನಗೆ ಕಲ್ಲಿನಿಂದ ಮತ್ತು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಹೊಟ್ಟೆಗೆ ಹೊಡೆದರು. ಸದರಿ ಸಂದರ್ಭದಲ್ಲಿ ಸುರೇಶಪ್ಪ ಮತ್ತು ಅವರ ಮಕ್ಕಳು ನೀನು ದೂರು ನೀಡಿದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು. ಅದೇ ದಿನ ರಾತ್ರಿ 10.30 ರ ಸುಮಾರು ಹರಿಹರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು 2 ದಿನಗಳ ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ಮಾರನೇ ದಿನ ಪೊಲೀಸರು ಮದ್ಯಾಹ್ನ 1.00 ರಿಂದ 1.30 ರ ಸುಮಾರು ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿ, ಘಟನೆ ಬಗ್ಗೆ ಬರೆದುಕೊಂಡರು. ಸದರಿ ಸಂದರ್ಭದಲ್ಲಿ ಚಾಸಾ.2 ಮತ್ತು 3 ರವರು ಇದ್ದರು. ಸದರಿ ಸಂದರ್ಭದಲ್ಲಿ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಕೋಲು ಮತ್ತು ಒಂದು ಕಲ್ಲನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಗುರುತಿಸಿದ ಕೋಲು ಮತ್ತು ಕಲ್ಲನ್ನು ಕ್ರಮವಾಗಿ ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು. 5 ರಿಂದ 7 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 1 ರಿಂದ 4 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿ ಎಸ್ ಜೆ ವಕೀಲರಿಂದಃ**

ನಾನು ದೂರು ನೀಡಿದ ದಿನಾಂಕ ನಿಖರವಾಗಿ ನನಗೆ ನೆನಪಿಲ್ಲ. ನಿಪಿ.1 ನ್ನು ಠಾಣೆಯಲ್ಲಿ ಇದ್ದ ಒಬ್ಬರಿಂದ ಬರೆಸಿರುತ್ತೇನೆ. ನಿಪಿ.1 ನ್ನು ಪೊಲೀಸ್ ಸಿಬ್ಬಂದಿ ಬರೆದಿರುತ್ತಾರೆ. ಸದರಿಯವರ ಹೆಸರು ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ಘಟನೆ ದಿಃ 24.03.2024 ರಂದು ನಮೂದು ಇದೆ ಎಂದರೆ ಸಾಕ್ಷಿಯು ಬರೆಯುವವರು ತಪ್ಪು ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಿಪಿ.1 ದೂರನ್ನು ದಿಃ 26.08.2024 ರಂದು ನೀಡಿದ್ದೀರಿ ಎಂದರೆ ಸಾಕ್ಷಿಯು ದಿನಾಂಕ ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.3 ಮತ್ತು 4 ನ್ನು ದಿಃ 27.08.2024 ರಂದು ತೆಗೆದಿರುತ್ತಾರೆ ಎಂದರೆ ಸರಿ. ನಾನು ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಂಡ ದಿನಾಂಕ ನನಗೆ ನೆನಪಿಲ್ಲ. ನಿಪಿ.1 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ತಿಳಿದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಘಟನೆ ಬಗ್ಗೆ ಮಾತ್ರ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗೆ ಹೇಗೆ ಯಾರೊಂದಿಗೆ ಹೋಗಿದ್ದೆ ಎಂದು ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ. ಘಟನಾ ಸಂದರ್ಭದಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಸ್ಥಳಕ್ಕೆ ಎಷ್ಟು ಜನ ಪೊಲೀಸರು ಬೇಟಿ ನೀಡಿದ್ದರು ಎಂದು ನನಗೆ ನೆನಪಿಲ್ಲ. ಸ್ಥಳದಲ್ಲಿ ಪೊಲೀಸರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಅಂಶಗಳನ್ನು ಪೊಲೀಸರು ನನಗೆ ಓದಿ ಹೇಳಿರುತ್ತಾರೆ ಆದರೆ ಸದರಿ ಅಂಶಗಳು ನನಗೆ ಈಗ ನೆನಪಿಲ್ಲ. ಪೊಲೀಸರು ಸ್ಥಳಕ್ಕೆ ಯಾವ ದಿನಾಂಕದಂದು ಬಂದಿದ್ದರು ಎಂದು ನನಗೆ ನೆನಪಿಲ್ಲ. ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಮು.ಮಾ 1 ಮತ್ತು 2 ರಂತಹ ಕೋಲು ಮತ್ತು ಕಲ್ಲುಗಳು ರಸ್ತೆ ಬದಿಯಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ನಮ್ಮ ಊರಲ್ಲಿ ಸಿಗುವುದಿಲ್ಲ ಬೇರೆ ಕಡೆ ಸಿಗುತ್ತವೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ಘಟನೆ ದಿನಾಂಕ ತಪ್ಪಾಗಿ ನಮೂದು ಆಗಿದೆ ಎಂದು ನಿಮಗೆ ಯಾವಾಗ ತಿಳಿಯಿತು ಎಂದರೆ ಸಾಕ್ಷಿಯು ಈಗ ನೀವು ಕೇಳಿದಾಗ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ನಾನು 2-3 ದಿನಗಳ ಕಾಲ ದಾಖಲಾಗಿದ್ದೆನು. ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ನನಗೆ ಹೇಳಿಕೆ ಪಡೆದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಯಾವುದೇ ನಕ್ಷೆ ಬರೆದಿಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಾಯಗಳು ಆಗದಿದ್ದರೂ ಸಹ ಆಸ್ಪತ್ರೆಯಿಂದ ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2 ನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ